# ಪ್ರಶ್ನೆ:

# “ಐಕ್ಯತೆಗೆ ಒಂದು ಮಿತಿ ಇರುವುದೊ?”

## ಉತ್ತರ:

“ಆಹಾ, ಸಹೋದರರು ಒಂದಾಗಿರುವುದು, ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು!” (ಕೀರ್ತನೆ 133:1). “ಸದ್ಭಾವನೆಯ” ಜನರು (ನೋಡಿರಿ ಲೂಕ 2:14) ವಾದಗ್ರಸ್ಥರಾಗಿರಲಿಲ್ಲ. ಅವರು ರಂಗಸ್ಥಳದಲ್ಲಿಯ ಪಂದ್ಯಾಟಗಾರರಂತೆ “ಹೋರಾಡುತ್ತಾರೆ” (ಗ್ರೀಕ: *athleo;* 2 ತಿಮೊಥೆ 2:5) ಆದರೆ “ಜಗಳವಾಡುವವರು” ಆಗುವಂತೆ - ಪ್ರಯಾಸ ಪಡುವದಿಲ್ಲ (ಗ್ರೀಕ: *machomai*; 2 ತಿಮೊಥೆ 2:24); ಅವರು ವಾದಿಸುವವರಾಗಿರುವದಿಲ್ಲ. ವಿಭಾಗಿಸುವ ಆತ್ಮವು ಕುರೂಪಿಯಾದದ್ದು ಮತ್ತು ಐಕ್ಯತೆಯು ಆಹ್ಲಾದಕರವಾದದ್ದು, ಕೆಲವು ಜನರ ಪ್ರತಿಕ್ರಿಯೆಯು ಒಂದಾಗಿರುವಿಕೆಗೆ ಇರುವ ಎಲ್ಲಾ ಬೋಧನಾ ಆತಂಕಗಳನ್ನು ತೆಗೆದು ಹಾಕುವದಾಗಿರುತ್ತದೆ.

### ಸಿದ್ಧಾಂತ ಇಲ್ಲ?

ಕೆಲವು ಧರ್ಮಗಳಲ್ಲಿ ಇಲ್ಲವೇ ತತ್ವಜ್ಞಾನಗಳಲ್ಲಿ ಯಾವುದೇ ಸಿದ್ಧಾಂತವು ಅಡ್ಡಿಯಾಗದು ಎಂಬ ಒಂದು ಸಿದ್ಧಾಂತವಿರುತ್ತದೆ. ಒಂದೇ ಆವರಣದೊಳಗೆ ಏಕೇಶ್ವರವಾದ ಬಹುದೇವತಾವಾದ, ಮತ್ತು ನಾಸ್ತಿಕತ್ವಗಳು ಅನ್ಯೋನ್ಯತೆಯಲ್ಲಿರಲು ಬಿಡಲ್ಪಟ್ಟಿವೆ. ಅಂಥ ತತ್ವಜ್ಞಾನದೊಳಗೆ ಬೌದ್ಧ ಧರ್ಮವು ಇಸ್ಲಾಮಿನಂತೆ ಅರ್ಹತೆಯುಳ್ಳದ್ದಾಗಿದೆ ಎಂದು ಯೋಚಿಸಲ್ಪಟ್ಟಿದೆ, ಅದಕ್ಕೆ ಹೊಸ ಒಡಂಬಡಿಕೆಯ ಕ್ರೈಸ್ತತ್ವದ ಸರಿಸಮಾನವಾದ ಸ್ಥಾನ ಕೊಡಲ್ಪಟ್ಟಿದೆ. ಅಂಥ ತತ್ವಜ್ಞಾನಗಳನ್ನು ಸ್ವೀಕರಿಸುವವರು, ಕ್ರೈಸ್ತತ್ವವು ಮಾತ್ರವೇ ನಿಜವಾದ ಧರ್ಮ ಎಂದು ಹೇಳುವವನು ತನ್ನನ್ನು ಸಹನೆ ಇಲ್ಲದ ಮತಭ್ರಾಂತ ಎಂದು ಗುರುತಿಸಿಕೊಳ್ಳುತ್ತಾನೆ ಎಂದು ಹೇಳುತ್ತಾರೆ.

### ಯೇಸುವಿನ ದೇವತ್ವ ಮಾತ್ರವೇ?

ಹೀಗಿದ್ದರೂ ಕೆಲವರು ಯೇಸುವಿನ ಧರ್ಮವು ಸಂಕುಚಿತವಾದದ್ದಾಗಿದೆ, ಆತನ ಮುಖಾಂತರವಾಗಿ ಅಲ್ಲದೇ ದೇವರ ಬಳಿಗೆ ಯಾರೂ ಬರುವದಿಲ್ಲ (ಯೋಹಾನ 14:6) ಎಂದು ನಂಬುತ್ತಾರೆ. ಇದೊಂದು ಬೇರೆಯಾದ ಅವರಣವಾಗಿರುವಾಗ, ಕ್ರಿಸ್ತನ ದೈವತ್ವದ ಕೆಲವು ಬೋಧನೆಯನ್ನು ಒಳಗೊಂಡಿರುವವರೆಗೆ ಅದೂ ಸಹ ಅನೇಕ ಭಿನ್ನವಾದ ತತ್ವಗಳಿಗೆ ಆಶ್ರಯ ಕೊಟ್ಟಿರುತ್ತದೆ. “ಹಾಗೆ ಒಬ್ಬನು ಯೇಸುವು ಕರ್ತನೆಂದು ಅರಿಕೆ ಮಾಡುವಂತೆ, ಅವನು ನನ್ನ ಸಹೋದರನಾಗಿದ್ದಾನೆ ಮತ್ತು ನಮ್ಮ ಅನ್ಯೋನ್ಯತೆಯು ನಿಜವಾದದ್ದಾಗಿರುತ್ತದೆ” ಎಂದು ಕೆಲವು ಬೈಬಲ್ ವಿಶ್ವಾಸಿಗಳು ಹೇಳುತ್ತಾರೆ. ಕ್ರಿಸ್ತನ ದೈವತ್ವವಲ್ಲದೇ ಇತರ ಕೆಲವು ತತ್ವಗಳು ಅಗತ್ಯ ಎಂದು ಹೇಳುವವರಿಗೆ ವಿರುದ್ಧವಾಗಿ ಅಂಥ ಜನರು ಅಸಹನೆಯನ್ನು ವ್ಯಕ್ತಪಡಿಸುತ್ತಾರೆ.

## ತಪ್ಪು ಮಾಡುವ ಪ್ರಸಂಗಿಗಳು?

ತತ್ವದಲ್ಲಿ ತಪ್ಪಾಗಿರುವ ಕೆಲವು ಪ್ರಸಂಗಿಗಳೊಂದಿಗೆ ಐಕ್ಯತೆ ಇರಬೇಕೆಂಬ ಬಯಕೆಯು ಮಾರ್ಕ 9:38-40ನ್ನು ದುರುಪಯೋಗಪಡಿಸಲು ಕಾರಣವಾಗಿದೆ:

> ಯೋಹಾನನು ಆತನಿಗೆ, "ಬೋಧಕನೇ, ಯಾವನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವ ಬಿಡಿಸುವದನ್ನು ನಾವು ಕಂಡು ಅವನು ನಮಗೆ ಸೇರಿದವನಲ್ಲವಾದ್ದರಿಂದ ಅವನಿಗೆ ಅಡ್ಡಿ ಮಾಡಿದೆವು" ಎಂದು ಹೇಳಲಾಗಿ ಯೇಸು, "ಅವನಿಗೆ ಅಡ್ಡಿ ಮಾಡಬೇಡಿರಿ; ನನ್ನ ಹೆಸರಿನ ಮೇಲೆ ಅದ್ಭುತವನ್ನು ಮಾಡಿ ಏಕಾಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ. *ನಮ್ಮನ್ನು ಎದುರಿಸದವನು ನಮ್ಮ ಪಕ್ಷದವನೇ ಎಂದು ಹೇಳಿದನು.*" (ಒತ್ತಿ ಹೇಳಿದ್ದು ನನ್ನದು.)

ಐಕ್ಯತೆಯ ಅಮೂಲ್ಯ ಹೆಸರಿನಲ್ಲಿ ಸಭಾ ಪಂಗಡದ ಸಭಾಪಾಲಕರನ್ನು ಮತ್ತು ತಪ್ಪು ಮಾಡುವ ಸುವಾರ್ತಾ ಪ್ರಸಂಗಿಗಳನ್ನು ಒಪ್ಪಿಕೊಳ್ಳುವುದು ಸರಿಯೆಂದು ಈ ವಾಕ್ಯ ಭಾಗದಿಂದ ತೀರ್ಮಾನಿಸಬಹುದೋ? ಮಾರ್ಕ 9ರಲ್ಲಿಯ ದೆವ್ವ ಬಿಡಿಸುವವನು ವೈಯಕ್ತಿಕವಾಗಿ ಯೋಹಾನನಿಗೆ ತಿಳಿಯದೇ ಇದ್ದವನಾದ್ದರಿಂದ ಅವನು ಸುಳ್ಳು ಬೋಧಕನೆಂದು ಅರ್ಥವಾಗುವುದೋ? ಅದಕ್ಕೆ ವಿರುದ್ಧವಾಗಿ, ಯೇಸುವು ಆ ಮನುಷ್ಯನನ್ನು ಒಪ್ಪಿಕೊಂಡನು ಮತ್ತು ಯೇಸುವು ಸುಳ್ಳು ಬೋಧಕನನ್ನು ಒಪ್ಪಿಕೊಳ್ಳುವದಿಲ್ಲವೆಂದು ನಾವು ತಿಳಿಯದವರಾಗಿದ್ದೇವೆ (ನೋಡಿರಿ ಮತ್ತಾಯ 7:15-23). ಆ ಮನುಷ್ಯನು ನಿಜವಾಗಿಯೂ ಯೇಸುವಿನ ಹೆಸರಿನಲ್ಲಿ ದೆವ್ವಗಳನ್ನು ಓಡಿಸಿದನು, ಮೋಸಗಾರನು ಅಂಥ ಕಾರ್ಯವನ್ನು ಮಾಡಲಾರನು (ನೋಡಿರಿ ಅಪೊಸ್ತಲರ ಕೃತ್ಯಗಳು 19:13-16). ಈ ಸಂದರ್ಭದಲ್ಲಿ ಯೇಸುವು ಸಭಾಪಂಗಡದ ಸಭಾಪಾಲಕನನ್ನು ಮತ್ತು ತಪ್ಪುಮಾಡುವ ಸುವಾರ್ತಾ ಪ್ರಸಂಗಿ ಗಳನ್ನು ಒಪ್ಪಿಕೊಂಡನೆಂದು ಹೇಳುವುದು ಇತರ ಅನೇಕ ವಾಕ್ಯಭಾಗಗಳನ್ನು ರದ್ದು ಪಡಿಸುವಂಥದ್ದಾಗುತ್ತದೆ: ಮತ್ತಾಯ 15:13, 14; ಯೋಹಾನ 8:32; ರೋಮಾಪುರ 16:17; 1 ಥೆಸಲೊನೀಕ 5:21, 22; ಗಲಾತ್ಯ 1:6-9; ಎಫೆಸ 4:1-7; 2 ಪೇತ್ರ 2:1, 2; 1 ಯೋಹಾನ 4:1; 2 ಯೋಹಾನ 9-11; 2 ತಿಮೊಥೆ 4:1-5.

## ಅಪೊಸ್ತಲರ ಬೋಧನೆ

ಯೇಸುಕ್ರಿಸ್ತನ ದೇವತ್ವವನ್ನು ದಾಟಿ ಕೆಲವೊಂದು ಬೋಧನೆಯು ಅಗತ್ಯವಾಗಿದೆ ಎಂಬುದು ಯೋಹಾನ 12:48ರಲ್ಲಿ ತೋರಿಸಲ್ಪಟ್ಟಿತು: "ನನ್ನನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದ್ದು ಒಂದು ಇದೆ, ಅದು ಯಾವದೆಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೆ ದಿನಗಳಲ್ಲಿ ತೀರ್ಪುಮಾಡುವುದು." ಯೇಸು ಹೇಳಿದ ಮಾತು ಅಪೊಸ್ತಲರಿಗೆ ವರ್ಗಾಯಿಸಿದ ಕಟ್ಟುವ ಮತ್ತು ಬಿಚ್ಚುವ ಅಧಿಕಾರವನ್ನೂ ಒಳಗೊಂಡಿರುತ್ತದೆ (ಮತ್ತಾಯ 18:18). ಅಪೊಸ್ತಲನನ್ನು ಸ್ವೀಕರಿಸುವುದು ಕ್ರಿಸ್ತನನ್ನೂ ಆತನ ತಂದೆಯನ್ನೂ ಸ್ವೀಕರಿಸುವದಾಗಿದೆ (ಮತ್ತಾಯ 10:40). ಒಬ್ಬ ಅಪೊಸ್ತಲನನ್ನು ತಿರಸ್ಕರಿಸುವುದು ಕ್ರಿಸ್ತನನ್ನೂ ಆತನ ತಂದೆಯನ್ನೂ ತಿರಸ್ಕರಿಸುವುದಾಗಿದೆ (ಲೂಕ 10:16). ಪ್ರಥಮ ಕ್ರೈಸ್ತರು ಕ್ರಿಸ್ತನ ದೇವತ್ವವನ್ನು ಹಿಡಿದುಕೊಂಡದ್ದಲ್ಲದೇ, ಅಪೊಸ್ತಲರ ಬೋಧನೆಯನ್ನೂ ಹಿಡಿದುಕೊಂಡರು (ಅಪೊಸ್ತಲರ ಕೃತ್ಯಗಳು 2:36, 42).

ಕ್ರಿಸ್ತನಿಗೂ ಮತ್ತು ಕ್ರಿಸ್ತನಲ್ಲಿಯ ಐಕ್ಯತೆಗೂ ನಿಷ್ಠೆಯು, "ಯೇಸುವು ಕರ್ತನಾಗಿದ್ದಾನೆ" ಎಂದು ಹೇಳುವದಕ್ಕಿಂತ ಹೆಚ್ಚಿನದನ್ನು ಒಳಗೊಂಡಿರುತ್ತದೆ. "ನೀವು ನನ್ನನ್ನು ಸ್ವಾಮೀ, ಸ್ವಾಮೀ ಎಂದು ಕರೆದು ನಾನು ಹೇಳುವದನ್ನು ನಡಿಸದೇ ಇರುವು ದೇಕೆ?" (ಲೂಕ 6:46) ಎಂದು ಯೇಸು ತಾನೇ ಹೇಳಿದ್ದಾನೆ. ಪುನರುಜ್ಜೀವನದ ಸಮಯದಲ್ಲಿ (ಕ್ರಿ.ಶ. 30ರ ಪಂಚಾಶತ್ತಮದ ದಿನದಂದು ಯುಗದ ಸಮಾಪ್ತಿಯ ವರೆಗೆ) ತನ್ನ ಹನ್ನೆರಡು ಜನ ಅಪೊಸ್ತಲರು ಅಧಿಕಾರದ ಹನ್ನೆರಡು ಸಿಂಹಾಸನಗಳ ಮೇಲೆ ಇರುವರೆಂದು ಆತನು ಮತ್ತಾಯ 19:28ರಲ್ಲಿ ಹೇಳಿದ್ದಾನೆ. ಇದಲ್ಲದೆ ಆತನು ಅವರೊಂದಿಗೆ ಅವರ ಜೀವನಗಳ ಅಂತ್ಯದ ವರೆಗೆ ಮಾತ್ರವಲ್ಲ ಆದರೆ ಯುಗದ ಸಮಾಪ್ತಿಯವರೆಗೆ ಇರುವೆನೆಂದು ವಾಗ್ದಾನ ಮಾಡಿದ್ದಾನೆ (ಮತ್ತಾಯ 28:20). ಅವರು ಬೋಧಿಸಿದ್ದ ಯಾವುದೇ ಬೋಧನೆಯು ಸತ್ಯವಾಗಿತ್ತು ಮತ್ತು ಅವರು ಬೋಧಿ ಸದೇ ಇದ್ದ ಯಾವುದೇ ಬೋಧನೆಯು ತಪ್ಪಾಗಿತ್ತು (1 ಯೋಹಾನ 4:6). ಆದುದರಿಂದ, ರಕ್ಷಣೆಯ ಯೋಜನೆ, ಸಭೆ, ಹೆಸರು, ಆರಾಧನೆಯ ವಿಧಾನ ಇಲ್ಲವೇ ಜೀವಿಸಲು ಮಾರ್ಗ ಇವುಗಳ ಬಗ್ಗೆ ಅಪೊಸ್ತಲಿಕ ಬೋಧನೆಯೊಂದಿಗೆ ಬೇರೆ ಯಾವುದನ್ನಾದರೂ ಒಪ್ಪಂದ ಮಾಡಿಕೊಳ್ಳುವವನು ಸತ್ಯದಲ್ಲಿ ಕ್ರಿಸ್ತನಿಗೆ ನಿಷ್ಠನಾಗಿರುವನೆಂದು ಹೇಳಲಿಕ್ಕಾಗದು.

### ಮುಕ್ತಾಯ

ಹೊಸ ಒಡಂಬಡಿಕೆಯು ಬೋಧಿಸುವಂಥದ್ದು ನಿಜವಾದ ಶಿಷ್ಯತ್ವದ ಅಗತ್ಯ ಭಾಗವಾಗಿರುವುದು. ಕ್ರಿಸ್ತನಲ್ಲಿ ದೇವರು ಮನ್ನಣೆ ಮಾಡಿದ ಐಕ್ಯತೆಯು, ಒಬ್ಬನು ಐಕ್ಯತೆಯನ್ನು ಎಷ್ಟು ಅಪೇಕ್ಷಿಸುವನು ಎಂಬುದರ ಮೇಲೆ ಅಲ್ಲ, ಒಬ್ಬನು ಎಲ್ಲಾ ಜನರನ್ನು ಎಷ್ಟು ಪ್ರೀತಿಸುವನು ಎಂಬುದರ ಮೇಲೆ ಅಲ್ಲ, ಆದರೆ ಹೊಸ ಒಡಂಬಡಕೆಯ ಇಪ್ಪತ್ತೇಳು ಪರಿಶುದ್ಧ ಪುಸ್ತಕಗಳ ಮೇಲೆ ಅವಲಂಭಿಸಿರುತ್ತದೆ.

---

## ಪೂರ್ವ ಸಂಕಲ್ಪದ ಬಗ್ಗೆ ಬೈಬಲಿನ ದೃಷ್ಟಿಕೋನ ಯಾವುದು?
## (ರೋಮಾಪುರ 9:6-16; ಎಫೆಸ 1:4, 5, 11)

ದೇವರು ಪಕ್ಷಪಾತಿಯಲ್ಲ (ಅಕ್ಷರಶಃವಾಗಿ ಗ್ರೀಕದಿಂದ, "ಮುಖ ದಾಕ್ಷಿಣ್ಯ ತೋರಿ ಸುವವನಲ್ಲ"; ಅಪೊಸ್ತಲರ ಕೃತ್ಯಗಳು 10:34, 35; ನೋಡಿರಿ ರೋಮಾಪುರ 2:11), ಮತ್ತು ಪ್ರತಿಯೊಬ್ಬನು ತನ್ನ ಬಗ್ಗೆ ಲೆಕ್ಕಾ ಕೊಡತಕ್ಕದ್ದು (ರೋಮಾಪುರ 14:12). ಆದುದರಿಂದ ಬೈಬಲಿನ ಪೂರ್ವ ಸಂಕಲ್ಪವು ಇಲ್ಲವೇ ಪೂರ್ವ ನಿರ್ಣಯವು *ಗುಣಲಕ್ಷಣದ್ದಾಗಿರುವುದು ಹಾಗೂ ವ್ಯಕ್ತಿಗಳಾಗಿರುವದಿಲ್ಲ.*

ರೋಮಾಪುರ 9ನ್ನು ನೋಡಿರಿ. ನಿಜವಾದ, ಇಸ್ರಾಯೇಲ್ಯರು ಶಾರೀರಿಕ ಯೆಹೂದ್ಯರಾಗಿರಲಿಲ್ಲ (ಮತ್ತಾಯ 3:9) ಎಂದು ವಚನ 6 ಹೇಳುತ್ತದೆ, ಆದರೆ ಯಾರ ಹೃದಯಗಳು ಸರಿಯಾಗಿರುವವೋ (ರೋಮಾಪುರ 2:29) ಮತ್ತು ದೇವರ ಚಿತ್ತವನ್ನು ಮಾಡುವವರು ಯಾರಾಗಿರುತ್ತಾರೋ (ನೋಡಿರಿ ರೋಮಾಪುರ 2:13; ಯಾಕೋಬ 1:22) ಅವರು ನಿಜವಾದ ಇಸ್ರಾಯೇಲ್ಯರು 7ರಿಂದ 9ರ ವರೆಗಿನ ವಚನಗಳಲ್ಲಿ, ನಂಬಿಕೆಯ ಹೆಜ್ಜೆಗಳಲ್ಲಿ ನಡೆಯುವವರು ಅಬ್ರಹಾಮನ ನಿಜವಾದ ಸಂತತಿಯವರಾಗಿರುವರು ಎಂದು ಪೌಲನು ಹೇಳಿದನು (ರೋಮಾಪುರ 4:12), ಅದನ್ನು ಇಸಾಕನು ಮಾಡಿದನು, ಆದರೆ ಇಷ್ಮಾಯೇಲನು ಮಾಡಲಿಲ್ಲ. ವಚನ 11ರಲ್ಲಿ

ದೇವರು ಮುಂದಾಗಿ ತಿಳಿದಿದ್ದನು, ಆದರೆ ಯಾಕೋಬ ಮತ್ತು ಏಸಾವರಲ್ಲಿ ಯಾವ ರೀತಿಯ ಗುಣಲಕ್ಷಣಗಳು ಇರುವವೆಂಬುದನ್ನು ಮೊದಲಾಗಿ ನೇಮಿಸದೆ ಇರುವದನ್ನು ನಾವು ಕಂಡುಕೊಳ್ಳುತ್ತೇವೆ. ಅವರು ತಮ್ಮ ಗುಣಗಳನ್ನು ತಾವೇ ಮಾಡಿಕೊಂಡರು, ಮತ್ತು ದೇವರು (ತನ್ನ ಪೂರ್ವ ತಿಳುವಳಿಕೆಯ ಆಧಾರದ ಮೇಲೆ) ಜೀವನದಲ್ಲಿ ಅವರ ಸ್ಥಳಗಳಿಗಾಗಿ ಯೋಜನೆಗಳನ್ನು ಮಾಡಿದನು.

ದೇವರು ಯಾರನ್ನೂ ದ್ವೇಷಿಸುವದಿಲ್ಲ ಎಂಬುದನ್ನು ವಚನ 13 ಸೂಚಿಸುತ್ತದೆ (ನೋಡಿರಿ ಯೋಹಾನ 3:16). "ದ್ವೇಷಿಸುವುದು" ಎಂಬ ಪದವು ಒಬ್ಬನ ಸ್ವಂತ-ಕಾರ್ಯಗಳಿಂದ ದೇವರ ಮೆಚ್ಚಿಕೆಯನ್ನು ಕಳೆದುಕೊಳ್ಳುವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಗೌರವದ ಪಾತ್ರೆಗಳಾಗುವ ಎಲ್ಲರನ್ನೂ ದೇವರು ಮೊದಲೇ ತಿಳಿದು ಕೊಂಡಿರುತ್ತಾನೆ. ಹಾಗಿದ್ದರೂ ಗೌರವದ ಪಾತ್ರೆಗಳು ಯಾರು ಆಗುವರು ಎಂಬುದನ್ನು ದೇವರು ತೀರ್ಮಾನಿಸುವದಿಲ್ಲ; ಪ್ರತಿಯೊಬ್ಬನು ಅದನ್ನು ತನ್ನಷ್ಟಕ್ಕೆ ತಾನೇ ತೀರ್ಮಾನಿಸಿಕೊಳ್ಳುವನು. "ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹ ವಾಸವನ್ನು ಬಿಟ್ಟು ತನ್ನನ್ನು ಶುದ್ಧ ಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ ಇರುವನು" (2 ತಿಮೊಥೆ 2:21). ಒಬ್ಬನು ಸ್ವಾರ್ಥಿಯಾಗಿರಲು ಮತ್ತು ದೇವರಿಗೆ ಅವಿಧೇಯನಾಗಿರಲು ಆಯ್ಕೆ ಮಾಡಿಕೊಳ್ಳುವಾಗ, ಅವನು ಏನಾಗುವನು ಎಂಬುದನ್ನು ದೇವರು ಮೊದಲೇ ತಿಳಿದಿರುವನು; ಮತ್ತು ಸೇವೆ ಮಾಡಲು ಅವನಿಗಾಗಿ ಆತನಿಗೆ ಒಂದು ಸ್ಥಳವಿರುವುದು, ದೇವರ ಉದ್ದೇಶವನ್ನು ದುಷ್ಟ ಫರೋಹನೂ ಸಹ ಸೇವೆ ಮಾಡಿದನು (ನೋಡಿರಿ ವಚನ 17).

ರಕ್ಷಣೆಯು ಕ್ರಿಸ್ತನ ಬಗ್ಗೆ ಮನುಷ್ಯನ ಜ್ಞಾನದ ಮೇಲೆ ಅವಲಂಭಿಸಿರುವದು (ಯೋಹಾನ 6:44, 45; ರೋಮಾಪುರ 10:1, 2), ದೇವರ ಮೊದಲಿನ ನೇಮಕದ ಮೇಲೆ ಅಲ್ಲ, ದುಷ್ಟ ಮನುಷ್ಯನು ಮುಳ್ಳುಗೋಲಿಗೆ ಎಷ್ಟುಸಲ ಒದ್ದರೂ (ನೋಡಿರಿ ಅಪೊಸ್ತಲರ ಕೃತ್ಯಗಳು 26:14), ಅವನು ದೇವರ ನಿತ್ಯವಾದ ನಿರ್ಣಯಗಳನ್ನು ಬದಲಾಯಿಸಲಾರನು. ತನಗೆ ವಿಧೇಯರಾಗುವವರ ಮೇಲೆ ದೇವರು ಕರುಣೆಯುಳ್ಳವನಾಗಿರುವನು, ಮತ್ತು ಅವಿಧೇಯರನ್ನು ಆತನು ಶಿಕ್ಷಿಸುವನು (ಕೀರ್ತನೆ 103:17, 18; ರೋಮಾಪುರ 2:4-11). ದೇವರನ್ನು ಮೆಚ್ಚಿಸಲು ಬಯಸುವವನು, ಆತನ ಯೋಜನೆಗೆ ಅನುಗುಣವಾಗಿ ಇಷ್ಟವುಳ್ಳವನಾಗಿರಬೇಕು (ಪ್ರಕಟನೆ 22:17; KJV) ಮತ್ತು ಓಡಬೇಕು (1 ಕೊರಿಂಥ 9:24-26).

ಜಗತ್ತು ಅಸ್ತಿತ್ವಕ್ಕೆ ಬರುವದಕ್ಕಿಂತ ಮೊದಲೇ ದೇವರು ತಾನು ಕ್ರಿಸ್ತನಲ್ಲಿ ಗುರುತಿಸುವ ಜನರು ಪರಿಶುದ್ಧರೂ ದೋಷವಿಲ್ಲದವರೂ ಮತ್ತು ಪ್ರೀತಿಸುವವರೂ ಆಗಿರುವರೆಂಬುದನ್ನು ತೀರ್ಮಾನಿಸಿದ್ದನೆಂದು ಎಫೆಸ 1:4 ಪ್ರಕಟಿಸುತ್ತದೆ. ಆ ಗುಣಲಕ್ಷಣಗಳು ತನ್ನ ಜನರ ಗುರುತುಗಳಾಗಿರುವವು ಎಂದು ಆತನು ಪೂರ್ವದಲ್ಲಿಯೇ ನೇಮಿಸಿದ್ದನು, ಆದರೆ ಪ್ರತಿಯೊಬ್ಬನೂ ತನ್ನನ್ನು ಪರಿಶುದ್ಧನನ್ನಾಗಿ ಮಾಡಿಕೊಳ್ಳುವುದು (1 ಪೇತ್ರ 1:16), ದೋಷವಿಲ್ಲದವನಾಗಿರುವುದು (ಫಿಲಿಪ್ಪಿ 2:14, 15) ಮತ್ತು ಪ್ರೀತಿಸುವವನಾಗಿರುವುದು (1 ಥೆಸಲೊನೀಕ 4:9, 10) ಅವನಿಗೇ ಬಿಡಲ್ಪಟ್ಟಿದೆ.

ಕ್ರಿಸ್ತನನ್ನು ಸ್ವೀಕರಿಸುವವರು ದೇವರ ಮಕ್ಕಳಂತೆ ಸ್ವೀಕರಿಸಲ್ಪಡುವವರೆಂದು ದೇವರು ನೇಮಿಸಿದನು (ಎಫೆಸ 1:5). ಕ್ರಿಸ್ತನಲ್ಲಿರುವವರು, ಪರಿಶುದ್ಧರಾಗಿ, ದೋಷವಿಲ್ಲದವರಾಗಿ, ಮತ್ತು ಪ್ರೀತಿಸುವವರಾಗಿ, ಮತ್ತು ಮಕ್ಕಳಂತೆ ಸ್ವೀಕರಿಸಲ್ಪಟ್ಟವರಾಗಿ

ಬಾಧ್ಯತೆಯನ್ನು ಹೊಂದುವರು (ಎಫೆಸ 1:11). ಹಾಗಿದದ್ದರೂ ಬಾದ್ಯಸ್ಥಿಕೆಯು ಶರತ್ತಿನದಾಗಿದೆ, ಯಾಕಂದರೆ ವಾಗ್ದಾನವನ್ನು ಹೊಂದಿಕೊಂಡ ಅದೇ ಎಫೆಸದವರು, ತಮ್ಮ ಪಾಪಗಳಿಗಾಗಿ ಮಾನಸಾಂತರ ಪಡದಿದ್ದರೆ ಮತ್ತು ಭಕ್ತಿಯ ಕಾರ್ಯಗಳಿಗಾಗಿ ಹಿಂದಿರುಗದಿದ್ದರೆ ತಿರಸ್ಕರಿಸಲ್ಪಡುವರೆಂದು ಎಚ್ಚರಿಸಲ್ಪಟ್ಟರು (ಪ್ರಕಟನೆ 2:5).

© 2009 Truth for Today